IV Semester B.C.A. Examination, June/July 2026
(SEP 2024 – 25)
ಕನ್ನಡ ಭಾಷಾ ಪಠ್ಯ ಪತ್ರಿಕೆ – ೪
ಗಣಕ ಕನ್ನಡ

SE – 313

ಸಮಯ : 3 ಗಂಟೆಗಳು

ಗರಿಷ್ಠಾಂಕಗಳು : 80

I. ಈ ಕೆಳಗಿನ ಯಾವುದಾದರೂ ಆರು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (6×2=12)

1) ಅಬ್ರಹಾಂ ಲಿಂಕನ್ ಅವರನ್ನು ಪರಿಚಯಿಸಿ.

2) ಸುಬ್ರಾಯಭಟ್ಟರಿಗೆ 'ನೂಲ ಹುಣ್ಣಿಮೆ'ಯ ಸಮಯದಲ್ಲಿ ಯಾಕೆ ವಿಪರೀತ ಬೇಡಿಕೆ ಇರುತ್ತಿತ್ತು ?

3) ಲೇಖಕರ ಪ್ರಕಾರ 'ಕಂತು ಮತ್ತು ಸಾಲ' ಈ ಪದಗಳ ನಡುವಿನ ವ್ಯತ್ಯಾಸವೇನು ?

4) ಲೇಖಕರು ಡಾ. ರಾಜ್‌ಕುಮಾರ್ ಅವರನ್ನು 'ಬಂಗಾರದ ಮನುಷ್ಯ' ಎನ್ನುವ ಬದಲು 'ಬೆವರಿನ ಮನುಷ್ಯ' ಎಂದು ಏಕೆ ಕರೆಯುತ್ತಾರೆ ?

5) 'ಸಲ್ವಾಜುಡಂ' ಎಂದರೇನು ?

6) ಕಟುಕರ ಸಂಗಯ್ಯನು 'ಧರೆಗೆ ದೊಡ್ಡವರನ್ನು' ಕಲ್ಯಾಣದೊಳಗೆ ಬಿಡಲು ನಿರಾಕರಿಸಿದ್ದೇಕೆ ?

7) ವೇದಗಳಲ್ಲಿ ವರ್ಣವ್ಯವಸ್ಥೆಯ ಉಗಮದ ಬಗ್ಗೆ ಏನು ಹೇಳಲಾಗಿದೆ ?

8) ಲೇಖಕರ ಪ್ರಕಾರ ತಂತ್ರಜ್ಞಾನದ ಮಾತುಗಳು ಯಾವಾಗ ಅರ್ಥಹೀನವಾಗುತ್ತವೆ ?

II. ಈ ಕೆಳಗಿನ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (4×5=20)

1) ಅಮೇರಿಕದ ಇತಿಹಾಸದ ಕ್ರೌರ್ಯ ಮತ್ತು ಉದಾತ್ತ ವ್ಯಕ್ತಿತ್ವಗಳ ನಡುವಿನ ದ್ವಂದ್ವವನ್ನು ಕವಿ ಹೇಗೆ ಚಿತ್ರಿಸಿದ್ದಾರೆ ?

2) ರಾಮುವಿನ ಮುಗ್ಧ ಪ್ರಶ್ನೆಗಳಿಗೆ ಉತ್ತರಿಸಲು ಸುಬ್ರಾಯ ಭಟ್ಟರು ಪಡುತ್ತಿದ್ದ ಸಂಕಟವನ್ನು ವಿವರಿಸಿ.

3) ಡಾ. ರಾಜ್‌ಕುಮಾರ್ ಅವರು ಸಾಂಸ್ಕೃತಿಕ ನಾಯಕನಾಗಿ ಬೆಳೆದ ಬಗೆ ಹೇಗೆ ?

4) ಬುಡಕಟ್ಟು ಸಮುದಾಯಗಳು ಎದುರಿಸುತ್ತಿರುವ ಸಮಸ್ಯೆಗಳೇನು ?

5) ಸತ್ವಪರೀಕ್ಷೆ ಮಾಡಲು ಹೋದ ಕಟುಕರ ಸಂಗಯ್ಯನಿಗೆ ಎದುರಾದ ಅನುಭವಗಳೇನು ?

6) 'ಜಾತ್ರೆಯಲ್ಲಿ ಶಿವ' ಕವಿತೆಯ ಸಾರಾಂಶವನ್ನು ಬರೆಯಿರಿ.

III. ಈ ಕೆಳಗಿನ ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (3×10=30)

1) 'ಮಾಯಾಮೃಗ' ಕಥೆಯಲ್ಲಿ ಬರುವ ಸ್ಮಶಾನದ ಸನ್ನಿವೇಶವನ್ನು ವಿವರಿಸಿ.

2) ಅಭಿವೃದ್ಧಿಯ ಭರಾಟೆಯಲ್ಲಿ ಬುಡಕಟ್ಟು ಮಹಿಳೆಯರ ಬದುಕನ್ನು ವಿವರಿಸಿ.

3) ಮಂಟೇಸ್ವಾಮಿಯವರು, ನಿಜವಾದ ಭಕ್ತರಿಗೆ 'ಲಿಂಗಧಾರಣೆ' ಮಾಡಿದ ಪ್ರಸಂಗವನ್ನು ವಿಶ್ಲೇಷಿಸಿರಿ.

4) 'ಸೀರೆಯ ಕಥೆ' ಪ್ರಬಂಧದಲ್ಲಿ ಭಾರತೀಯ ಉಡುಗೆಯು ವಿದೇಶಿ ನೆಲದಲ್ಲಿ ಎದುರಿಸಿದ ಅನುಭವಗಳೇನು ? ವಿವರಿಸಿರಿ.

5) ಊರಸಂತೆ ಎಲ್ಲಿರಬೇಕು ಎಂಬ ವಿಷಯಕ್ಕೆ, ಆದ ಘಟನೆಗಳನ್ನು ಪತ್ರದ ಹಿನ್ನಲೆಯಲ್ಲಿ ವಿವರಿಸಿರಿ.

IV. ಈ ಕೆಳಗಿನವುಗಳಲ್ಲಿ **ಮೂರಕ್ಕೆ** ಟಿಪ್ಪಣಿ ಬರೆಯಿರಿ. (3×4=12)

1) ಜನಪದ ಮಹಾಕಾವ್ಯಗಳು

2) ಜಾತಿ ವ್ಯವಸ್ಥೆ

3) ಮೂಢನಂಬಿಕೆಗಳು

4) ಬುಡಕಟ್ಟು ಜನಾಂಗ

5) ಚಿಪ್ಕೋ ಚಳವಳಿ.

V. ಸ್ವ–ಅಭಿವ್ಯಕ್ತಿ (ಯಾವುದಾದರೂ **ಒಂದು** ವಿಷಯನ್ನು ಕುರಿತು ಬರೆಯಿರಿ). (1×6=6)

1) ನೀವು ನೋಡಿದ ಸಿನಿಮಾ.

2) ನೀವು ನೋಡಿದ ನಿಮ್ಮ ಊರಿನ ಜಾತ್ರೆ.

---